STAR.

## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 882
ಉತ್ತರಿಸಬೇಕಾದ ದಿನಾಂಕ : 24.07.2024
ಸದಸ್ಯರ ಹೆಸರು : ಶ್ರೀ ವೈ.ಎಂ.ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸುವ ಸಚಿವರು : ಮಾನ್ಯ ಕಂದಾಯ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ವಿಕಲಚೇತನರಿಗೆ ನೀಡಲಾಗುತ್ತಿರುವ ಪಿಂಚಣಿ ಮೊತ್ತ ಎಷ್ಟು; ಯಾವ ಆಧಾರದ ಮೇಲೆ ಮತ್ತು ಎಷ್ಟು ಪಿಂಚಣಿ ನೀಡಲಾಗುತ್ತಿದೆ; (ಸರ್ಕಾರದ ಆದೇಶದ ಪ್ರತಿಗಳೊಂದಿಗೆ ಮಾಹಿತಿ ನೀಡುವುದು) | • ಸರ್ಕಾರದ ಆದೇಶ ಸಂಖ್ಯೆ: ಕಂಇ 39 ಎಮ್ಎಸ್‌ಟಿ 2021, ದಿನಾಂಕ: 31-07-2021ರ ಆದೇಶದಂತೆ ಶೇಕಡ 40 ರಿಂದ 75ರಷ್ಟು ಅಂಗವಿಕಲತೆಯುಳ್ಳ ಫಲಾನುಭವಿಗಳಿಗೆ ಮಾಸಿಕ ರೂ.800/-ಗಳ ಪಿಂಚಣಿಯನ್ನು ನೀಡಲಾಗುತ್ತಿದೆ.<br>• ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 47 ಡಿಎಸ್‌ಪಿ 2018, ದಿನಾಂಕ:16-03-2018 ರ ಆದೇಶದಂತೆ ಶೇಕಡ 75ಕ್ಕಿಂತ ಹೆಚ್ಚು ಅಂಗವೈಕಲ್ಯತೆ ಇರುವ ಅರ್ಹ ಫಲಾನುಭವಿಗಳಿಗೆ ಮಾಸಿಕ ರೂ.1400/-ಗಳ ಪಿಂಚಣಿಯನ್ನು ನೀಡಲಾಗುತ್ತಿದೆ.<br>• ಸರ್ಕಾರದ ಆದೇಶ ಸಂಖ್ಯೆ: ಡಿಎಸ್‌ಎಸ್‌ಪಿ-ಎಸ್‌ಸಿಎಸ್‌ಇ0-ಪಿಹೆಚ್‌ಪಿ/5/2021, ದಿನಾಂಕ:07-12-2021ರ ಆದೇಶದಂತೆ ಶೇಕಡ 75ಕ್ಕಿಂತ ಹೆಚ್ಚು ಮನೋವೈಕಲ್ಯತೆ ಹೊಂದಿರುವ ಫಲಾನುಭವಿಗಳಿಗೆ ಮಾಸಿಕ ರೂ.2000/-ಗಳ ಪಿಂಚಣಿಯನ್ನು ನೀಡಲಾಗುತ್ತಿದೆ (ಸದರಿ ಆದೇಶಗಳ ಪ್ರತಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ).<br>• ವಿಕಲಚೇತನ ಯೋಜನೆಯಡಿ ಪಿಂಚಣಿ ಕೋರಿ ಕೆಳಕಂಡ ದಾಖಲಾತಿಗಳೊಂದಿಗೆ ಅರ್ಜಿ ಸಲ್ಲಿಸುವ ಅರ್ಹ ಫಲಾನುಭವಿಗಳಿಗೆ ಸಂಬಂಧಪಟ್ಟ ತಹಶೀಲ್ದಾರರು ನೀಡುವ ಮಂಜೂರಾತಿ ಆದೇಶವನ್ನು ಅನುಸರಿಸಿ, ಆಧಾರ್ ಆಧಾರಿತ ಪಿಂಚಣಿ ವ್ಯವಸ್ಥೆಯಡಿ (AEPS) ಪಿಂಚಣಿ ಪಾವತಿಸಲಾಗುತ್ತಿದೆ.<br><br>1. ವಾಸಸ್ಥಳದ ದೃಢೀಕೃತ ದಾಖಲೆ.<br>2. ಆಧಾರ್ ಕಾರ್ಡ್ ಜೆರಾಕ್ಸ್ ಪ್ರತಿ.<br>3. ಬ್ಯಾಂಕ್/ಅಂಚೆ ಉಳಿತಾಯ ಖಾತೆ ವಿವರಗಳು (ಪಾಸ್ ಬುಕ್ ಜೆರಾಕ್ಸ್ ಪ್ರತಿ).<br>4. ಅಂಗವಿಕಲತೆ ಶೇಕಡಾವಾರು ಪ್ರಮಾಣ ಪತ್ರ(UDID CARD & DISABILITY CERTIFICATE) |

ಆ) ರಾಜ್ಯದಲ್ಲಿನ ಎಷ್ಟು ಅಂಗವಿಕಲರುಗಳಿಗೆ ಪಿಂಚಣಿಯನ್ನು ನೀಡಲಾಗುತ್ತಿದೆ; (ಜಿಲ್ಲಾವಾರು ಮಾಹಿತಿ ನೀಡುವುದು)

ರಾಜ್ಯದಲ್ಲಿ ಅಂಗವಿಕಲ ವೇತನ ಯೋಜನೆಯಡಿ ಒಟ್ಟು 9,23,607 ಫಲಾನುಭವಿಗಳು ಪಿಂಚಣಿ ಪಡೆಯುತ್ತಿದ್ದು, ಜಿಲ್ಲಾವಾರು ವಿವರಗಳು ಈ ಕೆಳಗಿನಂತಿದೆ.

| ಕ್ರ.ಸಂ | ಜಿಲ್ಲೆ | ಪಿಹೆಚ್ ಪಿ-1 | ಪಿಹೆಚ್ ಪಿ-2 | ಪಿಹೆಚ್ ಪಿ-3 | ಒಟ್ಟು |
|---|---|---|---|---|---|
| 1 | ಬಾಗಲಕೋಟೆ | 15651 | 18047 | 2771 | 36469 |
| 2 | ಬಳ್ಳಾರಿ | 7439 | 11643 | 2752 | 21834 |
| 3 | ಬೆಂಗಳೂರು ಗ್ರಾಮಾಂತರ | 5638 | 5594 | 1443 | 12675 |
| 4 | ಬೆಳಗಾವಿ | 27901 | 56228 | 8817 | 92946 |
| 5 | ಬೆಂಗಳೂರು | 11428 | 23352 | 4761 | 39541 |
| 6 | ಬೀದರ್ | 15294 | 21302 | 3785 | 40381 |
| 7 | ಚಾಮರಾಜನಗರ | 7749 | 11154 | 1007 | 19910 |
| 8 | ಚಿಕ್ಕಬಳ್ಳಾಪುರ | 7198 | 14321 | 2090 | 23609 |
| 9 | ಚಿಕ್ಕಮಗಳೂರು | 5032 | 9055 | 1286 | 15373 |
| 10 | ಚಿತ್ರದುರ್ಗ | 10168 | 27496 | 1697 | 39361 |
| 11 | ದಕ್ಷಿಣ ಕನ್ನಡ | 8461 | 7337 | 2212 | 18010 |
| 12 | ದಾವಣಗೆರೆ | 8331 | 15150 | 4211 | 27692 |
| 13 | ಧಾರವಾಡ | 12196 | 33186 | 2389 | 47771 |
| 14 | ಗದಗ | 10234 | 10143 | 1750 | 22127 |
| 15 | ಹಾಸನ | 12427 | 10826 | 2262 | 25515 |
| 16 | ಹಾವೇರಿ | 13903 | 24320 | 3150 | 41373 |
| 17 | ಕಲಬುರಗಿ | 17182 | 21179 | 3846 | 42207 |
| 18 | ಕೊಡಗು | 1792 | 2910 | 662 | 5364 |
| 19 | ಕೋಲಾರ | 6026 | 14035 | 2344 | 22405 |
| 20 | ಕೊಪ್ಪಳ | 10617 | 17024 | 5048 | 32689 |
| 21 | ಮಂಡ್ಯ | 13766 | 13909 | 2734 | 30409 |
| 22 | ಮೈಸೂರು | 14684 | 20592 | 3169 | 38445 |
| 23 | ರಾಯಚೂರು | 9203 | 17033 | 3574 | 29810 |
| 24 | ರಾಮನಗರ | 7099 | 7507 | 1572 | 16178 |
| 25 | ಶಿವಮೊಗ್ಗ | 6712 | 11679 | 2683 | 21074 |
| 26 | ತುಮಕೂರು | 18179 | 23582 | 3925 | 45686 |
| 27 | ಉಡುಪಿ | 5387 | 5175 | 1412 | 11974 |
| 28 | ಉತ್ತರ ಕನ್ನಡ | 8819 | 6226 | 2045 | 17090 |
| 29 | ವಿಜಯನಗರ | 9986 | 12250 | 1946 | 24182 |
| 30 | ವಿಜಯಪುರ | 13984 | 17529 | 4145 | 35658 |
| 31 | ಯಾದಗಿರಿ | 4301 | 19655 | 1893 | 25849 |
| | **ಒಟ್ಟು** | **326787** | **509439** | **87381** | **923607** |

**ಇ)** ರಾಜ್ಯದಲ್ಲಿ ವಿಕಲಚೇತನರಿಗೆ ನೀಡುವ ಪಿಂಚಣಿಗಾಗಿ ಬಜೆಟ್‌ನಲ್ಲಿ ಮೀಸಲಿಟ್ಟ ಒಟ್ಟು ಹಣ ಎಷ್ಟು; ಕಳೆದ ಮೂರು ವರ್ಷಗಳ ಮಾಹಿತಿ ನೀಡುವುದು;

ಕಳೆದ ಮೂರು ವರ್ಷಗಳ ಅವಧಿಯಲ್ಲಿ ರಾಜ್ಯದಲ್ಲಿ ವಿಕಲಚೇತನರಿಗೆ ಪಿಂಚಣಿ ನೀಡುವ ಸಲುವಾಗಿ ಮೀಸಲಿಟ್ಟ ಆಯವ್ಯಯ ಅಂದಾಜು ವಿವರ ಈ ಕೆಳಗಿನಂತಿದೆ.

| ಕ್ರ.ಸಂ | ಸಾಲು | ಕೇಂದ್ರದ ಪಾಲು (ರೂ.ಲಕ್ಷಗಳಲ್ಲಿ) | ರಾಜ್ಯದ ಪಾಲು (ರೂ.ಲಕ್ಷಗಳಲ್ಲಿ) | ಒಟ್ಟು (ರೂ.ಲಕ್ಷಗಳಲ್ಲಿ) |
|---|---|---|---|---|
| 1. | 2021-22 | 1618.00 | 111120.00 | 112738.00 |
| 2. | 2022-23 | 1618.00 | 131644.00 | 133262.00 |
| 3. | 2023-24 | 1618.00 | 146171.95 | 147789.95 |
| ಒಟ್ಟು | | **4854.00** | **388935.95** | **393789.95** |

**ಈ)** ರಾಜ್ಯದಲ್ಲಿನ ಅಂಗವಿಕಲರುಗಳಿಗೆ ಪಿಂಚಣಿಯನ್ನು ಹೆಚ್ಚಿಸುವ ಯಾವುದಾದರೂ ಪ್ರಸ್ತಾವನೆ/ ಶಿಫಾರಸ್ಸುಗಳು ಸರ್ಕಾರದ ಮುಂದಿದೆಯೇ; ಇಲ್ಲವಾದಲ್ಲಿ ತುಂಬಾ ಕಡಿಮೆ ಸಂಖ್ಯೆಯಲ್ಲಿರುವ ಇವರುಗಳಿಗೆ ಹೆಚ್ಚಿನ ಪಿಂಚಣಿಯನ್ನು ನೀಡುವ ಬಗ್ಗೆ ಸರ್ಕಾರದ ನಿಲುವೇನು? (ಮಾಹಿತಿ ನೀಡುವುದು)

- ಶೇಕಡ 40 ರಿಂದ 75ರಷ್ಟು ಅಂಗವಿಕಲತೆಯುಳ್ಳ ಫಲಾನುಭವಿಗಳಿಗೆ ಈ ಹಿಂದೆ ನೀಡುತ್ತಿದ್ದ ಮಾಸಿಕ ಪಿಂಚಣಿ ರೂ.600/-ನ್ನು ರೂ.800/-ಗಳಿಗೆ ಹೆಚ್ಚಿಸಿ ದಿನಾಂಕ:31-07-2021ರಂದು ಆದೇಶ ಹೊರಡಿಸಲಾಗಿದೆ.
- ಶೇಕಡ 75ಕ್ಕಿಂತ ಹೆಚ್ಚು ಅಂಗವಿಕಲತೆಯುಳ್ಳ ಫಲಾನುಭವಿಗಳಿಗೆ ಈ ಹಿಂದೆ ನೀಡುತ್ತಿದ್ದ ಮಾಸಿಕ ಪಿಂಚಣಿ ರೂ.1200/-ನ್ನು ರೂ.1400/-ಗಳಿಗೆ ಹೆಚ್ಚಿಸಿ ದಿನಾಂಕ:18-03-2018 ರಂದು ಆದೇಶ ಹೊರಡಿಸಲಾಗಿದೆ.
- ಶೇಕಡ 75ಕ್ಕಿಂತ ಹೆಚ್ಚು ಮನೋವೈಕಲ್ಯತೆ ಹೊಂದಿರುವ ಫಲಾನುಭವಿಗಳಿಗೆ ಈ ಹಿಂದೆ ನೀಡುತ್ತಿದ್ದ ಮಾಸಿಕ ಪಿಂಚಣಿ ರೂ.1400/-ನ್ನು ರೂ.2000/-ಗಳಿಗೆ ಹೆಚ್ಚಿಸಿ ದಿನಾಂಕ:07-12-2021ರಂದು ಆದೇಶ ಹೊರಡಿಸಲಾಗಿದೆ.

ಮೇಲಿನಂತೆ ನೀಡಲಾಗುತ್ತಿರುವ ಮಾಸಿಕ ಪಿಂಚಣಿಯನ್ನು ಹೆಚ್ಚಿಸುವ ಬಗ್ಗೆ ಸದ್ಯಕ್ಕೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

**ಕಡತ ಸಂಖ್ಯೆ:ಆರ್‌ಡಿ 125 ಕೆ.ಎ.ಟಿ/ ಎಸ್.ಎಸ್.ಪಿ 2024**

**(ಕೃಷ್ಣ ಬೈರೇಗೌಡ)**
**ಕಂದಾಯ ಸಚಿವರು**

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಶೇ.75ಕ್ಕಿಂತ ಹೆಚ್ಚಿನ ಮನೋವೈಕಲ್ಯತೆ ಹೊಂದಿದವರಿಗೆ ನೀಡುತ್ತಿರುವ ಮಾಸಾಶನವನ್ನು ಹೆಚ್ಚಿಸುವ ಕುರಿತು.

**ಓದಲಾಗಿದೆ:** 1.ಸರ್ಕಾರಿ ಆದೇಶ ಸಂಖ್ಯೆ: ಕಂಇ 134 ಎಂಎಸ್‌ಟಿ 2007, ದಿನಾಂಕ:10.09.2007.
2.ಸರ್ಕಾರಿ ಆದೇಶ ಸಂಖ್ಯೆ: ಕಂಇ 03 ಪಿಹೆಚ್‌ಪಿ 2008, ದಿನಾಂಕ:29.08.2008.
3.ಸರ್ಕಾರಿ ಆದೇಶ ಸಂಖ್ಯೆ: ಆರ್‌ಡಿ 74 ಡಿಎಸ್‌ಎಸ್‌ಪಿ 2013 ದಿನಾಂಕ:30.08.2013.
4.ಸರ್ಕಾರಿ ಆದೇಶ ಸಂಖ್ಯೆ: ಆರ್‌ಡಿ 47 ಡಿಎಸ್‌ಎಸ್‌ಪಿ 2013, ದಿನಾಂಕ:16.03.2018.

**ಪ್ರಸ್ತಾವನೆ:**

ಸರ್ಕಾರವು ವಿಶೇಷಚೇತನರಿಗೆ ಸಾಮಾಜಿಕ ಭದ್ರತೆಯನ್ನು ಒದಗಿಸಿ ಸಮಾಜದ ಮುಖ್ಯವಾಹಿನಿಗೆ ತರುವ ನಿಟ್ಟಿನಲ್ಲಿ ಶೇ.75ಕ್ಕಿಂತ ಹೆಚ್ಚಿನ ಅಂಗವೈಕಲ್ಯತೆ ಹೊಂದಿರುವ ವಿಶೇಷಚೇತನರಿಗೆ ಮೇಲೆ ಓದಲಾದ (1), (2) ಮತ್ತು (3) ರ ಸರ್ಕಾರಿ ಆದೇಶದಂತೆ ಕ್ರಮವಾಗಿ ರೂ.400/-,1000/- ಮತ್ತು ರೂ.1200/-ಗಳ ಮಾಸಿಕ ಪಿಂಚಣಿಯನ್ನು ಮಂಜೂರು ಮಾಡಿ ಆದೇಶಿಸಲಾಗಿರುತ್ತದೆ. ಮುಂದುವರೆದು ಓದಲಾದ (4) ರ ಸರ್ಕಾರಿ ಆದೇಶದನ್ವಯ ಸದರಿ ಮಾಸಾಶನವನ್ನು ರೂ.1200/- ರಿಂದ ರೂ.1400/- ಗಳಿಗೆ ಹೆಚ್ಚಿಸಿ ಆದೇಶಿಸಿಲಾಗಿರುತ್ತದೆ.

2021-22ರ ಆಯವ್ಯಯ ಘೋಷಣೆ ಕಂಡಿಕೆ 133 ರನ್ವಯ ಶೇ.75 ಕ್ಕಿಂತ ಹೆಚ್ಚು ಅಂಗವೈಕಲ್ಯತೆ ಹೊಂದಿರುವವರಿಗೆ ಮಾಸಿಕ ಪಿಂಚಣಿಯನ್ನು ರೂ.2000/-ಗಳಿಗೆ ದಿನಾಂಕ:01.12.2021 ರಿಂದ ಜಾರಿಗೆ ಬರುವಂತೆ ಹೆಚ್ಚಿಸಲು ಸರ್ಕಾರವು ತೀರ್ಮಾನಿಸಿದ್ದು, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ : ಡಿಎಸ್‌ಎಸ್‌ಪಿ -ಎಸ್‌ಸಿಎಸ್‌ಇ೦-ಪಿಹೆಚ್‌ಪಿ/5/2021,**
**ಬೆಂಗಳೂರು, ದಿನಾಂಕ: 07ನೇ ಡಿಸೆಂಬರ್ 2021**

2021-22 ರ ಆಯವ್ಯಯ ಘೋಷಣೆ ಕಂಡಿಕೆ 133ರನ್ವಯ ಶೇ.75 ಕ್ಕಿಂತ ಹೆಚ್ಚು ಮನೋವೈಕಲ್ಯತೆ ಹೊಂದಿರುವವರಿಗೆ ಪ್ರಸ್ತುತ ನೀಡುತ್ತಿರುವ ಅಂಗವಿಕಲ ಮಾಸಾಶನವನ್ನು ರೂ.1400/- ಗಳಿಂದ ಮಾಸಾಶನವನ್ನು ರೂ.2000/- ಗಳಿಗೆ ಹೆಚ್ಚಿಸಿ ದಿನಾಂಕ:01.12.2021 ರಿಂದ ಜಾರಿಗೆ ಬರುವಂತೆ ಆದೇಶಿಸಲಾಗಿದೆ.

ಈ ಉದ್ದೇಶಕ್ಕಾಗಿ 2021-22ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ: 2235-02-101-020-116 ಅಂಗವಿಕಲರಿಗೆ ಹಾಗೂ ಬಡ ಅಂಗವಿಕಲರಿಗೆ ಮಾಸಿಕ ಧನ ಸಹಾಯ- ಸಾಮಾಜಿಕ ಭದ್ರತೆ ಮತ್ತು ಪಿಂಚಣಿರಡಿ ಒದಗಿಸಿರುವ ರೂ.66038.00 ಲಕ್ಷಗಳಲ್ಲಿ ಉಳಿತಾಯವಾಗಿರುವ ರೂ.3699.47 ಲಕ್ಷಗಳಲ್ಲಿ ರೂ.2400.00ಲಕ್ಷಗಳನ್ನು ನಿರ್ದೇಶಕರು ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯ ಬೆಂಗಳೂರು ಇವರಿಗೆ ಬಿಡುಗಡೆ ಮಾಡಲಾಗಿದೆ.

ಈ ಆದೇಶದಲ್ಲಿನ ದಿನಾಂಕದಿಂದ ಹೆಚ್ಚಿಸಿರುವ ಮೊತ್ತವನ್ನು ವಿತರಿಸಲು ನಿದೇಶಕರು ಖಜಾನೆ ನಿರ್ದೇಶನಾಲಯ ಹಾಗೂ ಜಿಲ್ಲಾ ಖಜಾನಾಧಿಕಾರಿಗಳು /ಉಪಖಜಾನಾಧಿಕಾರಿಗಳು ಇವರಿಗೆ ಅಧಿಕಾರ ಪ್ರತ್ಯಾಯೋಜಿಸಿ ಆದೇಶಿಸಲಾಗಿದೆ.

......2

ಈ ಯೋಜನೆಗೆ ತಗಲುವ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2235-02-101-0-20-116 ಅಂಗವಿಕಲರಿಗೆ ಹಾಗೂ ಬಡಅಂಗವಿಕಲರಿಗೆ ಮಾಸಿಕ ಧನಸಹಾಯ-ಸಾಮಾಜಿಕ ಭದ್ರತೆ ಪಿಂಚಣಿ-Monthly Financial Assistance to the Physically Challenged and the Disabled Poor (NSAP)ರಡಿ ಭರಿಸತಕ್ಕದ್ದು ಹಾಗೂ ಈ ಯೋಜನೆಯಡಿ ಬಿಡುಗಡೆ ಮಾಡಲಾದ ಅನುದಾನವನ್ನು ಬಿಡುಗಡೆಗೊಳಿಸಿರುವ ಉದ್ದೇಶಕ್ಕಾಗಿಯೇ ಬಳಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 564 ವೆಚ್ಚ-7/2021, ದಿ:02.12.2021ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ

ಕರ್ನಾಟಕ ರಾಜ್ಯಪಾಲರ ಅಜ್ಞಾನುಸಾರ
ಮತ್ತು ಅವರಹೆಸರಿನಲ್ಲಿ

07/12/2021
(ಜಯಲಕ್ಷ್ಮಿ)
ಸರ್ಕಾರದ ಉಪ ಕಾರ್ಯದರ್ಶಿ,
(ಕಂದಾಯ ಇಲಾಖೆ (ಸೇವೆಗಳು-3, ಕೆ.ಎ.ಟಿ.
ಬಾನಿ, ಭೂ.ಸು.ಕೋ &ಸಾ.ಭ ಮತ್ತುಪಿಂಚಣಿ)

ಇವರಿಗೆ:

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ವಿಕಾಸಸೌದ, ಬೆಂಗಳೂರು ಇವರಿಗೆ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಪ್ರಕಟಿಸಿ, ಪ್ರಕಟಿತ 100 ಪ್ರತಿಗಳನ್ನು ನಿರ್ದೇಶಕರು, ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯ, ಕಂದಾಯ ಭವನ, ಬೆಂಗಳೂರು ಇವರಿಗೆ ಒದಗಿಸಬೇಕೆಂದು ಕೋರಿದೆ.

ಪ್ರತಿಯನ್ನು:

1. ಮಹಾಲೇಖಪಾಲರು [ಲೆಕ್ಕಪತ್ರ & ಲೆಕ್ಕ ತಪಾಸಣೆ], [ಎ & ಇ] ಕರ್ನಾಟಕ, ಬೆಂಗಳೂರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
4. ಮಾನ್ಯ ಮುಖ್ಯ ಮಂತ್ರಿಯವರ ಪ್ರಧಾನ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು,
5. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು / ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು, ಬೆಂಗಳೂರು.
6. ಸರ್ಕಾರದ ಕಾರ್ಯದರ್ಶಿಗಳು [ಆಯವ್ಯಯ & ಸಂಪನ್ಮೂಲ] ವಿಧಾನಸೌಧ, ಬೆಂಗಳೂರು.
7. ಪ್ರಾದೇಶಿಕ ಆಯುಕ್ತರು, ಬೆಂಗಳೂರು / ಮೈಸೂರು / ಬೆಳಗಾವಿ / ಕಲಬುರಗಿ ವಿಭಾಗ.
8. ಎಲ್ಲಾ ಜಿಲ್ಲಾಧಿಕಾರಿಗಳು.
9. ಮಾನ್ಯ ಕಂದಾಯ ಸಚಿವರ ವಿಶೇಷ ಕರ್ತವ್ಯಾಧಿಕಾರಿ, ವಿಧಾನಸೌಧ, ಬೆಂಗಳೂರು.
10. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
11. ಸರ್ಕಾರದ ಅಧೀನ ಕಾರ್ಯದರ್ಶಿಗಳು, ಯೋಜನ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
12. ಸರ್ಕಾರದ ಅಧೀನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, [ವೆಚ್ಚ-7], ವಿಧಾನಸೌಧ, ಬೆಂಗಳೂರು.
13. ಎಲ್ಲಾ ಉಪವಿಭಾಗಾಧಿಕಾರಿಗಳು / ತಹಸೀಲ್ದಾರ್‌ರು.
14. ಎಲ್ಲಾ ಜಿಲ್ಲಾ ಖಜಾನೆ ಹಾಗೂ ಉಪ ಖಜಾನೆ ಅಧಿಕಾರಿಗಳು.
15. ಹೆಚ್ಚುವರಿ ಪ್ರತಿಗಳು / ಶಾಖಾ ರಕ್ಷಾ ಕಡತ.

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಡಿ ನೀಡುತ್ತಿರುವ ಮಾಸಾಶನವನ್ನು ಹೆಚ್ಚಿಸುವ ಕುರಿತು.

ಉಲ್ಲೇಖ : 1 ಸರ್ಕಾರದ ಆದೇಶ ಸಂಖ್ಯೆ : ಆರ್‌ಡಿ 47 ಡಿಎಸ್‌ಪಿ 2018, ದಿನಾಂಕ : 16/03/2018.

2 ಸರ್ಕಾರದ ಆದೇಶ ಸಂಖ್ಯೆ : ಆರ್‌ಡಿ 47 ಡಿಎಸ್‌ಪಿ 2018, ದಿನಾಂಕ : 14/09/2018.

3 ಸಚಿವ ಸಂಪುಟದ ನಿರ್ಣಯ ಪ್ರಕರಣ ಸಂಖ್ಯೆ : ಸಿ: 319/2021 / ಸಿ : 320/2021/ ಸಿ: 321/2021, ದಿನಾಂಕ : 28/07/2021.

*********

ಪ್ರಸ್ತಾವನೆ :

ಸರ್ಕಾರವು ಅಸಹಾಯಕ ವೃದ್ಧರಿಗೆ / ನಿರ್ಗತಿಕ ವಿಧವೆಯರಿಗೆ ಮತ್ತು ಅಂಗವಿಕಲರಿಗೆ ಸಾಮಾಜಿಕ ಭದ್ರತೆ ಒದಗಿಸಿ ಸಮಾಜದ ಮುಖ್ಯವಾಹಿನಿಗೆ ತರುವ ನಿಟ್ಟಿನಲ್ಲಿ ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಡಿ ಮಾಸಾಶನವನ್ನು ಅರ್ಹ ಫಲಾನುಭವಿಗಳಿಗೆ ನೀಡುತ್ತಿರುತ್ತದೆ.

ಮೇಲೆ [1] ರಲ್ಲಿ ಓದಲಾದ ಸರ್ಕಾರಿ ಆದೇಶದನ್ವಯ ವಿಧವಾ ವೇತನ ಮತ್ತು ಅಂಗವಿಕಲ ವೇತನದಡಿ 40% ರಿಂದ 75% ರಷ್ಟು ಅಂಗವಯೈಕಲ್ಯವಿರುವ ಫಲಾನುಭವಿಗಳಿಗೆ ರೂ. 600/-ಗಳ ಮಾಸಾಶನ ನೀಡಲಾಗುತ್ತಿದೆ.

ಮೇಲೆ [2] ರಲ್ಲಿ ಓದಲಾದ ಸರ್ಕಾರಿ ಆದೇಶದನ್ವಯ ಸಂಧ್ಯಾ ಸುರಕ್ಷಾ ರೂ.1000/- ಗಳ ಮಾಸಾಶನ ನೀಡಲಾಗುತ್ತಿದೆ.

ಮೇಲೆ [3] ರಲ್ಲಿ ಓದಲಾದ ದಿನಾಂಕ : 28/7/2021ರ ಸಚಿವ ಸಂಪುಟ ನಿರ್ಣಯದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಕಂದಾಯ ಇಲಾಖೆಯಡಿ ಈ ಕೆಳಕಂಡಂತೆ ಘೋಷಣೆ ಮಾಡಿರುತ್ತಾರೆ.

**"ಸಂಧ್ಯಾ ಸುರಕ್ಷಾ ಯೋಜನೆಯಡಿಯಲ್ಲಿ ನೀಡುತ್ತಿರುವ ಮೊತ್ತವನ್ನು ಪ್ರಸ್ತುತ ಇರುವ ರೂ.1000/- ರಿಂದ ರೂ.1200/- ಗಳಿಗೆ ಹೆಚ್ಚಿಸಲು / ಶೇಕಡ 40 ರಿಂದ ಶೇಕಡ 75ರಷ್ಟು ಅಂಗವಿಕಲತೆಯುಳ್ಳ ಫಲಾನುಭವಿಗಳಿಗೆ ಪ್ರಸುತ ನೀಡುತ್ತಿರುವ ವೇತನವನ್ನು ರೂ.600/- ರಿಂದ ರೂ.800/- ಗಳಿಗೆ ಹೆಚ್ಚಿಸಲು / ಹಾಲಿ ನೀಡಲಾಗುತ್ತಿರುವ ವಿಧವಾ ವೇತನವನ್ನು ರೂ.600/- ರಿಂದ ರೂ.800/- ಗಳಿಗೆ ಹೆಚ್ಚಿಸಲು ಸಚಿವ ಸಂಪುಟವು ನಿರ್ಧರಿಸಿತು."**

ಈ ಹಿನ್ನಲೆಯಲ್ಲಿ ಸಂಧ್ಯಾ ಸುರಕ್ಷಾ / ವಿಧವಾ ವೇತನ ಮತ್ತು ಅಂಗವಿಕಲ ವೇತನಗಳಡಿ ನೀಡಲಾಗುತ್ತಿರುವ ಮಾಸಾಶನದ ಮೊತ್ತವನ್ನು ಹೆಚ್ಚಿಸಲು ಸರ್ಕಾರವು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ : ಕಂಇ 39 ಎಮ್‌ಎಸ್‌ಟಿ 2021,**
**ಬೆಂಗಳೂರು, ದಿನಾಂಕ : 31ನೇ ಜುಲೈ 2021.**

ಸಂಧ್ಯಾ ಸುರಕ್ಷಾ / ವಿಧವಾ ವೇತನ ಮತ್ತು ಅಂಗವಿಕಲ ವೇತನಗಳಡಿ ನೀಡಲಾಗುತ್ತಿರುವ ಮಾಸಾಶನದ ಮೊತ್ತವನ್ನು ದಿನಾಂಕ : 01/08/2021ರಿಂದ ಜಾರಿಗೆ ಬರುವಂತೆ ಈ ಕೆಳಕಂಡಂತೆ ಹೆಚ್ಚಿಸಿ ಆದೇಶಿಸಿದೆ.

1. ಸಂಧ್ಯಾ ಸುರಕ್ಷಾ ಯೋಜನೆಯಡಿಯಲ್ಲಿ ನೀಡುತ್ತಿರುವ ಮೊತ್ತವನ್ನು ಪ್ರಸ್ತುತ ಇರುವ ರೂ. 1000/- ರಿಂದ ರೂ. 1200/- ಗಳಿಗೆ ಹೆಚ್ಚಿಸಲಾಗಿದೆ.
2. ಶೇಕಡ 40 ರಿಂದ ಶೇಕಡ 75ರಷ್ಟು ಅಂಗವಿಕಲತೆಯುಳ್ಳ ಫಲಾನುಭವಿಗಳಿಗೆ ಪ್ರಸ್ತುತ ನೀಡುತ್ತಿರುವ ವೇತನವನ್ನು ರೂ. 600/- ರಿಂದ ರೂ. 800/- ಗಳಿಗೆ ಹೆಚ್ಚಿಸಲಾಗಿದೆ.
3. ಹಾಲಿ ನೀಡಲಾಗುತ್ತಿರುವ ವಿಧವಾ ವೇತನವನ್ನು ರೂ. 600/- ರಿಂದ ರೂ. 800/- ಗಳಿಗೆ ಹೆಚ್ಚಿಸಲಾಗಿದೆ.

- - - - -2

ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಡಿ ಈಗಾಗಲೇ ಮಾಸಾಶನ ಪಡೆಯುತ್ತಿರುವ ಫಲಾನುಭವಿಗಳಿಗೆ ಈ ಆದೇಶದಲ್ಲಿ ಹೆಚ್ಚಿಸಿರುವ ಮಾಸಾಶನ ಮೊತ್ತವನ್ನು ವಿತರಿಸಲು ಆಯುಕ್ತರು, ಖಜಾನೆ ಆಯುಕ್ತಾಲಯ ಹಾಗೂ ಜಿಲ್ಲಾ ಖಜಾನಾಧಿಕಾರಿಗಳು / ಉಪ ಖಜಾನಾಧಿಕಾರಿಗಳು ಇವರಿಗೆ ಅಧಿಕಾರ ಪ್ರತ್ಯಾಯೋಜಿಸಿ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಜಯಲಕ್ಷ್ಮಿ) /07/21
ಸರ್ಕಾರದ ಉಪ ಕಾರ್ಯದರ್ಶಿ,
ಕಂದಾಯ ಇಲಾಖೆ(ಸೇವೆಗಳು-3,ಕೆ.ಎ.ಟಿ,ಬಾನಿ.
ಭೂ.ಸು.ಕೋ ಮತ್ತು ಸಾ.ಭ & ಪಿಂಚಣಿ)

ಇವರಿಗೆ : ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ವಿಕಾಸಸೌಧ, ಬೆಂಗಳೂರು ಇವರಿಗೆ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಪ್ರಕಟಿಸಿ, ಪ್ರಕಟಿತ 100 ಪ್ರತಿಗಳನ್ನು ನಿರ್ದೇಶಕರು, ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯ, ಕಂದಾಯ ಭವನ, ಬೆಂಗಳೂರು, ಇವರಿಗೆ ಒದಗಿಸಬೇಕೆಂದು ಕೋರಿದೆ.

ಪ್ರತಿಯನ್ನು :

1. ಮಹಾಲೇಖಪಾಲರು [ಲೆಕ್ಕಪತ್ರ & ಲೆಕ್ಕ ತಪಾಸಣೆ], [ಎ & ಇ] ಕರ್ನಾಟಕ, ಬೆಂಗಳೂರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
4. ಸರ್ಕಾರದ
5. ಮಾನ್ಯ ಮುಖ್ಯ ಮಂತ್ರಿಯವರ ಪ್ರಧಾನ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು,
6. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು / ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು, ಬೆಂಗಳೂರು.
7. ಸರ್ಕಾರದ ಕಾರ್ಯದರ್ಶೀಗಳು [ಆಯವ್ಯಯ & ಸಂಪನ್ಮೂಲ] ವಿಧಾನಸೌಧ, ಬೆಂಗಳೂರು.
8. ಪ್ರಾದೇಶಿಕ ಆಯುಕ್ತರು, ಬೆಂಗಳೂರು / ಮೈಸೂರು / ಬೆಳಗಾವಿ / ಕಲಬುರಗಿ ವಿಭಾಗ.
9. ಎಲ್ಲಾ ಜಿಲ್ಲಾಧಿಕಾರಿಗಳು.
10. ಮಾನ್ಯ ಕಂದಾಯ ಸಚಿವರ ವಿಶೇಷ ಕರ್ತವ್ಯಾಧಿಕಾರಿ, ವಿಧಾನಸೌಧ, ಬೆಂಗಳೂರು.
11. ಸರ್ಕಾರದ ಮುಖ್ಯಕಾರ್ಯದರ್ಶಿರವರ ಜಂಟಿ ಕಾರ್ಯದರ್ಶಿ, (ಸಚಿವ ಸಂಪುಟ ಶಾಖೆ)ವಿಧಾನ ಸೌಧ, ಬೆಂಗಳೂರು. (ಸಚಿವ ಸಂಪುಟದ ಪ್ರಕರಣ ಸಂಖ್ಯೆ : ಸಿ : 319/2021 / ಸಿ : 320/2021 / ಸಿ : 321/2021, ದಿನಾಂಕ : 28/07/202).
12. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು. ✓ಆಯುಕ್ತರು, ಖಜಾನೆ ಆಯುಕ್ತಾಲಯ, ಕೆ.ಪಿ.ಸಿ.ಎಲ್ ಕಟ್ಟಡ, ಬೆಂಗಳೂರು
13. ಸರ್ಕಾರದ ಅಧೀನ ಕಾರ್ಯದರ್ಶಿಗಳು, ಯೋಜನೆ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
14. ಸರ್ಕಾರದ ಅಧೀನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, [ವೆಚ್ಚ-7], ವಿಧಾನಸೌಧ, ಬೆಂಗಳೂರು.
15. ಎಲ್ಲಾ ಉಪವಿಭಾಗಾಧಿಕಾರಿಗಳು / ತಹಸೀಲ್ದಾರ್‌ರು.
16. ಎಲ್ಲಾ ಜಿಲ್ಲಾ ಖಜಾನೆ ಹಾಗೂ ಉಪ ಖಜಾನೆ ಅಧಿಕಾರಿಗಳು.
17. ಹೆಚ್ಚುವರಿ ಪ್ರತಿಗಳು / ಶಾಖಾ ರಕ್ಷಾ ಕಡತ.

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಡಿ ನೀಡುತ್ತಿರುವ ಮಾಸಾಶನವನ್ನು ಹೆಚ್ಚಿಸುವ ಕುರಿತು.

ಓದಲಾಗಿದೆ:
1. ಸರ್ಕಾರಿ ಆದೇಶ ಸಂಖ್ಯೆ: ಕಂಇ 39 ಡಿಎಸ್‌ಪಿ 2012, ದಿನಾಂಕ 12/06/2012.
2. ಸರ್ಕಾರಿ ಆದೇಶ ಸಂಖ್ಯೆ: ಆರ್‌ಡಿ 74 ಡಿಎಸ್‌ಪಿ 2013, ದಿನಾಂಕ 30/08/2013.
3. ಸರ್ಕಾರಿ ಆದೇಶ ಸಂಖ್ಯೆ: ಆರ್‌ಡಿ 45 ಡಿಎಸ್‌ಪಿ 2017, ದಿನಾಂಕ 20/04/2017.
4. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಹಾಗೂ ನಾಗರಿಕರ ಸಬಲೀಕರಣ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಮಮಇ 73 ಪಿಎಚ್‌ಪಿ 2018 ದಿನಾಂಕ: 14/03/2018

*******

**ಪ್ರಸ್ತಾವನೆ:**

ಸರ್ಕಾರವು ಅಸಹಾಯಕ ವೃದ್ಧರಿಗೆ, ನಿರ್ಗತಿಕ ವಿಧವೆಯರಿಗೆ, ಅಂಗವಿಕಲರಿಗೆ, ಆಂಗತ್ವ ಅಲ್ಪಸಂಖ್ಯಾತರು ಹಾಗೂ ಅವಿವಾಹಿತ/ವಿಚ್ಛೇದಿತ ಮಹಿಳೆಯರಿಗೆ ಸಾಮಾಜಿಕ ಭದ್ರತೆ ಒದಗಿಸಿ ಸಮಾಜದ ಮುಖ್ಯವಾಹಿನಿಗೆ ತರುವ ನಿಟ್ಟಿನಲ್ಲಿ ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಡಿ ಮಾಸಾಶನವನ್ನು ಅರ್ಹ ಫಲಾನುಭವಿಗಳಿಗೆ ನೀಡುತ್ತಿರುತ್ತದೆ.

ಮೇಲೆ ಓದಲಾದ (1)ರಲ್ಲಿನ ಸರ್ಕಾರಿ ಆದೇಶದನ್ವಯ ಇಂದಿರಾ ಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನದಡಿ 65 ರಿಂದ 80 ವರ್ಷದೊಳಗಿನ ಫಲಾನುಭವಿಗಳಿಗೆ ರೂ. 500/-ರ ಮಾಸಾಶನ ನೀಡಲಾಗುತ್ತಿದೆ.

ಮೇಲೆ ಓದಲಾದ (2) ರಲ್ಲಿನ ಸರ್ಕಾರಿ ಆದೇಶದನ್ವಯ, ಅಂಗವಿಕಲ ವೇತನದಡಿ, ಶೇಕಡಾ 40 ರಿಂದ 75 ರಷ್ಟು ಅಂಗವೈಕಲ್ಯವಿರುವ ಫಲಾನುಭವಿಗಳಿಗೆ ರೂ.500/-ಗಳ ಮಾಸಾಶನವನ್ನು ಹಾಗೂ ಶೇಕಡಾ 75 ಕ್ಕಿಂತ ಹೆಚ್ಚು ಅಂಗವೈಕಲ್ಯತೆ ಇರುವ ಅರ್ಹ ಫಲಾನುಭವಿಗಳಿಗೆ ರೂ. 1200/- ಮಾಸಾಶನವನ್ನು ನೀಡಲಾಗುತ್ತಿದೆ.

ಮೇಲೆ ಓದಲಾದ (3)ರ ಸರ್ಕಾರಿ ಆದೇಶದನ್ವಯ ಇಂದಿರಾಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನದಡಿ 60 ರಿಂದ 64 ವರ್ಷದೊಳಗಿನ ಫಲಾನುಭವಿಗಳಿಗೆ ರೂ. 500/-ರ ಮಾಸಾಶನ ನೀಡಲಾಗುತ್ತಿದೆ.

2018-19ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಕಂದಾಯ ಇಲಾಖೆಯಡಿ ಈ ಕೆಳಕಂಡಂತೆ ಘೋಷಣೆ ಮಾಡಿರುತ್ತಾರೆ:

> "ಸಾಮಾಜಿಕ ಭದ್ರತಾ ಮಾಸಿಕ ಪಿಂಚಣಿ ಯೋಜನೆಗಳಾದ ವೃದ್ಧಾಪ್ಯ ವೇತನ, ನಿರ್ಗತಿಕ ವಿಧವಾ ವೇತನ, ಸಂಧ್ಯಾ ಸುರಕ್ಷಾ, ಮನಸ್ವಿನಿ ಹಾಗೂ ಮೈತ್ರಿ ಯೋಜನೆಗಳಡಿ ನೀಡಲಾಗುತ್ತಿರುವ ಪಿಂಚಣಿ ಮೊತ್ತವನ್ನು ರೂ.500 ಗಳಿಂದ ರೂ.600 ಗಳಿಗೆ ಹೆಚ್ಚಿಸಲಾಗುವುದು".

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಹಾಗೂ ನಾಗರಿಕರ ಸಬಲೀಕರಣ ಇಲಾಖೆಯು ಕಂದಾಯ ಇಲಾಖೆಗೆ ಕಳುಹಿಸಿದ ಮೇಲೆ ಓದಲಾದ(4)ರ ಅನಧಿಕೃತ ಟಿಪ್ಪಣಿಯಲ್ಲಿ 2018-19ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಮಹಿಳಾ

ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಹಾಗೂ ನಾಗರಿಕರ ಸಬಲೀಕರಣ ಇಲಾಖೆಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ಘೋಷಣೆ ಮಾಡಿರುತ್ತಾರೆ.

> "2018-19ನೇ ಸಾಲಿನಿಂದ ಶೇ.75ಕ್ಕೂ ಹೆಚ್ಚಿನ ಅಂಗವೈಕಲ್ಯತೆ ಹೊಂದಿರುವ ವಿಕಲಚೇತನರಿಗೆ ನೀಡುತ್ತಿರುವ ಮಾಸಾಶನವನ್ನು 200 ರೂ.ಗಳಷ್ಟು ಹಾಗೂ ಶೇ.75ಕ್ಕೂ ಕಡಿಮೆ ಅಂಗವೈಕಲ್ಯತೆ ಹೊಂದಿರುವ ವಿಕಲಚೇತನರಿಗೆ ನೀಡುತ್ತಿರುವ ಮಾಸಾಶನವನ್ನು 100 ರೂ.ಗಳಷ್ಟು ಹೆಚ್ಚಿಸಲಾಗುವುದು".

ಅದರಂತೆ, ಪ್ರಸ್ತುತ ಶೇಕಡಾ 75ಕ್ಕೂ ಕಡಿಮೆ ಅಂಗವೈಕಲ್ಯತೆ ಹೊಂದಿರುವ ವಿಕಲಚೇತನರಿಗೆ ರೂ.500 ಹಾಗೂ ಶೇಕಡಾ 75 ಕ್ಕೂ ಹೆಚ್ಚು ಅಂಗವೈಕಲ್ಯತೆ ರೂ.1200/- ಮಾಸಾಶನವನ್ನು ನೀಡುತ್ತಿದ್ದು, ವಿಶೇಷ ಚೇತನರ ಸದರಿ ಮಾಸಾಶನವನ್ನು ಕ್ರಮವಾಗಿ ರೂ.100/- ಗಳನ್ನು (Less than 75% disability), ಸೇರಿಸಿ ರೂ.600 ಗಳನ್ನು ಹಾಗೂ ಶೇಕಡಾ 75 ಕ್ಕೂ ಹೆಚ್ಚು ಅಂಗವೈಕಲ್ಯತೆ ಇರುವ ವಿಶೇಷ ಚೇತನರಿಗೆ ರೂ.1200/- ಇರುವುದಕ್ಕೆ ರೂ.200/-ಗಳನ್ನು ಸೇರಿಸಿ ಆದೇಶ ಹೊರಡಿಸಬೇಕೆಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಹಾಗೂ ನಾಗರಿಕರ ಸಬಲೀಕರಣ ಇಲಾಖೆಯು ಕೋರಿದೆ.

ಈ ಹಿನ್ನೆಲೆಯಲ್ಲಿ, ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಡಿ ನೀಡಲಾಗುತ್ತಿರುವ ಮಾಸಾಶನದ ಮೊತ್ತವನ್ನು ಹೆಚ್ಚಿಸಲು ಸರ್ಕಾರವು ತೀರ್ಮಾನಿಸಿ, ಕೆಳಕಂಡಂತೆ ಆದೇಶಿಸಿದೆ:

<u>ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 47 ಡಿಎಸ್‌ಪಿ 2018, ಬೆಂಗಳೂರು. ದಿನಾಂಕ:16.03.2018</u>

ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಡಿ ನೀಡಲಾಗುತ್ತಿರುವ ಮಾಸಾಶನದ ಮೊತ್ತವನ್ನು ದಿನಾಂಕ:01-04-2018 ರಿಂದ ಜಾರಿಗೆ ಬರುವಂತೆ ಈ ಕೆಳಕಂಡಂತೆ ಹೆಚ್ಚಿಸಿ ಆದೇಶಿಸಿದೆ:

1. ಇಂದಿರಾ ಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನದಡಿ 60 ರಿಂದ 80 ವರ್ಷದೊಳಗಿನ ಅರ್ಹ ಫಲಾನುಭವಿಗಳಿಗೆ ನೀಡುತ್ತಿರುವ ಮಾಸಾಶನವನ್ನು ರೂ.500/- ರಿಂದ **ರೂ.600/-**ಕ್ಕೆ ಹೆಚ್ಚಿಸಲಾಗಿದೆ.
2. ನಿರ್ಗತಿಕ ವಿಧವಾ ವೇತನ, ಸಂಧ್ಯಾ ಸುರಕ್ಷಾ ಯೋಜನೆ, ಮನಸ್ವಿನಿ ಹಾಗೂ ಮೈತ್ರಿ ಯೋಜನೆಯಡಿ ಅರ್ಹ ಫಲಾನುಭವಿಗಳಿಗೆ ನೀಡುತ್ತಿರುವ ಮಾಸಾಶನವನ್ನು ರೂ.500/- ರಿಂದ **ರೂ.600/-**ಕ್ಕೆ ಹೆಚ್ಚಿಸಲಾಗಿದೆ.
3. ಅಂಗವಿಕಲ ವೇತನದಡಿ,
   (i) ಶೇಕಡಾ 40 ರಿಂದ 75 ರಷ್ಟು ಅಂಗವೈಕಲ್ಯವಿರುವ ಅರ್ಹ ಅಂಗವಿಕಲರಿಗೆ ನೀಡುತ್ತಿರುವ ಮಾಸಾಶನವನ್ನು ರೂ.500 ರಿಂದ **ರೂ.600/-**ಕ್ಕೆ ಹೆಚ್ಚಿಸಲಾಗಿದೆ.
   (ii) ಶೇಕಡಾ 75 ಕ್ಕಿಂತ ಹೆಚ್ಚು ಅಂಗವೈಕಲ್ಯತೆ ಇರುವ ಅರ್ಹ ಅಂಗವಿಕಲರಿಗೆ ನೀಡುತ್ತಿರುವ ಮಾಸಾಶನವನ್ನು ರೂ.1200 ಗಳಿಂದ **ರೂ.1400/-**ಗಳಿಗೆ ಹೆಚ್ಚಿಸಲಾಗಿದೆ.

ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಡಿ ಈಗಾಗಲೇ ಮಾಸಾಶನ ಪಡೆಯುತ್ತಿರುವ ಫಲಾನುಭವಿಗಳಿಗೆ ಈ ಆದೇಶದಲ್ಲಿ ಹೆಚ್ಚಿಸಿರುವ ಮಾಸಾಶನ ಮೊತ್ತವನ್ನು ವಿತರಿಸಲು ನಿರ್ದೇಶಕರು, ಖಜಾನೆ ನಿರ್ದೇಶನಾಲಯ ಹಾಗೂ ಜಿಲ್ಲಾ ಖಜಾನಾಧಿಕಾರಿಗಳು/ಉಪ ಖಜಾನಾಧಿಕಾರಿಗಳು ಇವರಿಗೆ ಅಧಿಕಾರ ಪ್ರತ್ಯಾಯೋಜಿಸಿ ಆದೇಶಿಸಲಾಗಿದೆ.

ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ: 1892, ದಿನಾಂಕ: 14-03-2018 ಹಾಗೂ ಟಿಪ್ಪಣಿ ಸಂಖ್ಯೆ: 1951 ರಲ್ಲಿ ದಿನಾಂಕ 15-03-2018 ರಲ್ಲಿ ನೀಡಿದ ಸಹಮತಿಯನ್ವಯ ಈ ಆದೇಶವನ್ನು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕೆ. ಉಮಾಪತಿ)
ಸರ್ಕಾರದ ಉಪ ಕಾರ್ಯದರ್ಶಿ
(ವಿ.ನಿ. ಹಾಗೂ ನೋಂ & ಮು)

<u>ಇವರಿಗೆ:</u>

ಸಂಕಲನಕಾರರು, ಕರ್ನಾಟಕ ವಿಶೇಷ ರಾಜ್ಯ ಪತ್ರ, ವಿಕಾಸಸೌಧ, ಬೆಂಗಳೂರು ಇವರಿಗೆ - ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಪ್ರಕಟಿಸಿ, ಪ್ರಕಟಿತ 100 ಪ್ರತಿಗಳನ್ನು ನಿರ್ದೇಶಕರು, ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯ, ಕಂದಾಯ ಭವನ, ಬೆಂಗಳೂರು ಇವರಿಗೆ ಒದಗಿಸಬೇಕೆಂದು ಕೋರಿದೆ.

<u>ಪ್ರತಿ:</u>

1. ಮಹಾಲೇಖಪಾಲರು (ಲೆಕ್ಕಪತ್ರ ಮತ್ತು ಲೆಕ್ಕ ತಪಾಸಣೆ), ಕರ್ನಾಟಕ, ಬೆಂಗಳೂರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
4. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು, ಬೆಂಗಳೂರು.
6. ಪ್ರಾದೇಶಿಕ ಆಯುಕ್ತರು, ಬೆಂಗಳೂರು/ಮೈಸೂರು/ಬೆಳಗಾವಿ/ಕಲಬುರಗಿ ವಿಭಾಗ.
7. ಎಲ್ಲಾ ಜಿಲ್ಲಾಧಿಕಾರಿಗಳು.
8. ಮಾನ್ಯ ಕಂದಾಯ ಸಚಿವರ ವಿಶೇಷ ಕರ್ತವ್ಯಾಧಿಕಾರಿ, ವಿಧಾನಸೌಧ, ಬೆಂಗಳೂರು.
9. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
10. ಸರ್ಕಾರದ ಅಧೀನ ಕಾರ್ಯದರ್ಶಿ, ಯೋಜನೆ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
11. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ(ವೆಚ್ಚ-7) , ವಿಧಾನಸೌಧ, ಬೆಂಗಳೂರು.
12. ವಿಭಾಗಾಧಿಕಾರಿಗಳು.
13. ಎಲ್ಲಾ ತಹಶೀಲ್ದಾರ್‌ರು.
14. ಎಲ್ಲಾ ಜಿಲ್ಲಾ ಖಜಾನೆ ಹಾಗೂ ಉಪ ಖಜಾನೆ ಅಧಿಕಾರಿಗಳು.
15. ಹೆಚ್ಚುವರಿ ಪ್ರತಿ ಮತ್ತು ಶಾಖಾ ರಕ್ಷಾ ಕಡತ.